ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Special Issue-1, Sep-Oct, 2023, Pp. 22--27.
©IIMRD, Mysuru.

IIMRD JOURNALS
www.iimrd.com

# ನರಸಾಪುರ ಮತ್ತು ಸುತ್ತಮುತ್ತಲಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ

ಡಾ. ಮುನಿರಾಜು. ಎಂ.*
*ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ(ಬಾಲಕರ) ಕಾಲೇಜು, ಕೋಲಾರ.

***ಸಾರಾಂಶ:* (Abstract)**

*ಕೋಲಾರ ಜಿಲ್ಲೆ ಎಂದರೆ ಹಿಂದೆ ಚಿನ್ನದ ನಾಡು ಮೈಸೂರು, ಗಂಧದಗುಡಿ ಮೈಸೂರು, ಎಂದು ಬಿ.ಎಂ ಶ್ರೀಕಂಠಯ್ಯನವರು ಕೋಲಾರದ ಬಗ್ಗೆ ಹಾಡಿ ಹೊಗಳಿದ್ದಾರೆ. ಇಂದು ಬಂಗಾರದ ನಾಡು, ರೇಷ್ಮೆ ಬೀಡು, ಹಣ್ಣು ಹೂ ತರಕಾರಿ ದವಸ ಧಾನ್ಯಗಳ ಕಣಜವೆಂದೇ ಪ್ರಸಿದ್ಧಿಯಾಗಿದೆ. ನಿರಂತರ ತುಂಬಿ ಹರಿಯುವ ನದಿಗಳಿಲ್ಲದಿದ್ದರೂ ಚಿನ್ನದಂತಹ ಬೆಳೆ ಬೆಳೆಯುವ ಫಲವತ್ತತೆಯ ಮಣ್ಣಿನ ಗಡಿಭಾಗದಲ್ಲಿರುವ ಕೋಲಾರ ಜಿಲ್ಲೆ ಕನ್ನಡ, ತೆಲುಗು, ತಮಿಳು, ಈಗ ನರಸಾಪುರದ ಬಳಿ ಕೈಗಾರಿಕಾ ಬೆಳವಣಿಗೆಯಿಂದ ಹಲವು ರಾಜ್ಯಗಳ ಜನರು ವಾಸವಾಗಿ ವೈವಿಧ್ಯಮಯ ಉರ್ದು, ಹಿಂದಿ, ಇನ್ನಿತರ ಭಾಷೆಗಳನ್ನು ಮಾತನಾಡುವುದರ ಮೂಲಕ ಕನ್ನಡದ ಕಂಪನ್ನು ಮೆರೆದ ಕಲೆ, ಸಾಹಿತ್ಯ, ಸಂಗೀತ, ಜನಪದ ಶಿಲ್ಪಕಲೆ ಮುಂತಾದ ಗ್ರಾಮೀಣ ಸಾಂಸ್ಕೃತಿಕ ಮತ್ತು ನಾಗರಿಕತೆಯ ಜೀವಂತ ಸಾಕ್ಷಿ ಸಿರಿ ಎತ್ತಿ ಹಿಡಿದಿರುವ ಜಿಲ್ಲೆಯ ನೆಲೆಯಾಗಿದೆ. ಪ್ರಸ್ತುತ ಲೇಖನದಲ್ಲಿ ನರಸಾಪುರ ಮತ್ತು ಸುತ್ತಮುತ್ತಲಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನು ಕುರಿತು ವಿಶ್ಲೇಷಿಸಲಾಗಿದೆ.*

***ಮುಖ್ಯಪದಗಳು* (Keywords)** *ನರಸಾಪುರ, ಐತಿಹಾಸಿಕ, ಸಾಂಸ್ಕೃತಿಕ, ಗಂಧದಗುಡಿ,* ಕರಗ ಜಾತ್ರೆ, *ಚಾಮರಾಜ ಒಡೆಯರು.*

## ಪೀಠಿಕೆ

ಇತಿಹಾಸ ಪ್ರಸಿದ್ಧವಾದ ಕೋಲಾರ ಜಿಲ್ಲೆ, ಜಗತ್ತಿನ ನಗರಗಳಲ್ಲಿ ಒಂದಾದ ಬೆಂಗಳೂರು ಮತ್ತು ಜಗತ್ತಿನ ಪುರಾಣ ಪ್ರಸಿದ್ಧ ಪುಣ್ಯ ಯಾತ್ರಾ ಸ್ಥಳ ತಿರುಮಲ ತಿರುಪತಿಗೆ ಹೋಗುವ ಹಾದಿಯಲ್ಲಿರುವ ಈ ಜಿಲ್ಲೆ ಮಹಾವಲ್ಲಿ ಅಥವಾ ಬಾಣರು, ಚೋಳರು, ಗಂಗರು ಕುವಲಾಪುರವಧೀಶ್ವರರು ಎಂಬ ಬಿರುದುನೊಂದಿಗೆ ಕೋಲಾರವನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದರು. ಹಾಗೆ ಕಂಚಿಯ ಪಲ್ಲವರು, ವಿಜಯನಗರ ಸಾಮ್ರಾಜ್ಯದ ವಿವಿಧ ಪಾಳ್ಯ ಪಟ್ಟುಗಳಾದ ಸುಗುಟೂರಿನ ಇಮ್ಮಡಿ ತಮ್ಮೇಗೌಡ, ಮುಮ್ಮಡಿ ತಮ್ಮೇಗೌಡ, ಬಿಜಾಪುರದ ಸುಲ್ತಾನರು ಮೊಘಲರ ಖಾಸಿಂ ಖಾನನು, ಮರಾಠರು, ಕಡಪಾದ ನವಾಬರು, ಅದವಾನಿಯ ಬಸಲತ್ ಜಂಗ್, ಇಂಗ್ಲೀಷರು, ಹೈದರಾಲಿ, ಟಿಪ್ಪು, ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು, ಕಮಿಷನರ್‌ಗಳು ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು ಮುಂತಾದವರ ಕಾಲಘಟ್ಟಗಳಲ್ಲಿ ಆಳ್ವಿಕೆಗೆ ಕೋಲಾರ ಮತ್ತು ನರಸಾಪುರ ಸುತ್ತಮುತ್ತಲಿನ ಪ್ರದೇಶಗಳು ಒಳಪಟ್ಟಿದ್ದವು.

*Please cite this article as:* ಡಾ.ಮುನಿರಾಜು. ಎಂ. (2023). ನರಸಾಪುರ ಮತ್ತು ಸುತ್ತಮುತ್ತಲಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.22–27.*

ಕೋಲಾರ ಜಿಲ್ಲೆಯ ಇತಿಹಾಸಕ್ಕೆ ಸಂಬಂಧಿಸಿದಂತೆ ಮೈಸೂರ್ ಆರ್ಕ್ಯಲಜಿಕಲ್ ಸೀರೀಸ್ ವ್ಯಾಲೂಮ್–10 ಬಿ ಲೈವಿಸ್ ರೈಸ್ ಕೋಲಾರ ಜಿಲ್ಲೆಯ ಶಾಸನಗಳ ಬಗ್ಗೆ 1905ರಲ್ಲಿ ಹೊರಡಿಸಿರುವ ಪುಸ್ತಕದಲ್ಲಿ 2060ಕ್ಕೂ ಹೆಚ್ಚು ಶಾಸನಗಳನ್ನು ನೂರಕ್ಕೂ ಹೆಚ್ಚು ಶಾಸನಗಳು ನೀರಾವರಿಗೆ ಸಂಬಂಧಿಸಿದ ಮಾಹಿತಿಗಳನ್ನು ಒಳಗೊಂಡಿದೆ. ಶಿಲಾಯುಗಕ್ಕೆ ಹೆಚ್ಚಿನ ಮಾಹಿತಿಗಾಗಿ ಹಲವಾರು ಸಂಶೋಧಕರಾದ ಆರ್ ಏ ಕೋಲ್, ಕೊಕ್ ಮುಂತಾದವರು ಕೋಲಾರ, ಶ್ರೀನಿವಾಸಪುರ, ಬಂಗಾರಪೇಟೆ, ಎಂ.ಶೇಷಾದ್ರಿ ಅವರು ಕೊಂಗರಾಜನಹಳ್ಳಿ, ಬೆಟ್ಟದಪುರ, ಕೋಲಾರ ಭಾಗದಲ್ಲಿ ಬಿ ನರಸಿಂಹಯ್ಯ, ಕೋಲಾರ ಭಾಗದ ಪಾಲಾರ್ ಮತ್ತು ಪೆನ್ನಾರ್ ನದಿ ಭಾಗಗಳಲ್ಲಿ ಕೆಬಿ ಶಿವತಾರಕ, ಬನಹಳ್ಳಿ, ಅರಭಿಕೊತ್ತನೂರು, ಕೆಂದಟ್ಟಿ, ಕಡಗಟ್ಟೂರು, ಗೋಣಕನಹಳ್ಳಿ, ಬೂದಿಕೋಟೆ ಪ್ರದೇಶಗಳಲ್ಲಿ ಬಿ ನರಸಿಂಹಯ್ಯ ಅವಶೇಷಗಳನ್ನು ಕಂಡುಹಿಡಿದಿದ್ದಾರೆ.

ಕೋಲಾರದಿಂದ ಪಶ್ಚಿಮಕ್ಕೆ ಸುಮಾರು 16 ಕಿಲೋಮೀಟರ್ ದೂರದಲ್ಲಿರುವ ನರಸಾಪುರ ಸುಮಾರು 250 ಅಥವಾ 300 ವರ್ಷಗಳ ಹಳೆಯ ಊರು ಸುಮಾರು 1950 ಮನೆಗಳು ಇರುವಂತಹ ಸ್ಥಳ ಹಿರಿಯರ ಪ್ರಕಾರ ನರಸರಾಣಿ ಎಂಬ ಬ್ರಾಹ್ಮಣ ಸ್ತ್ರೀಯೊಬ್ಬಳು ಮೈಸೂರು ಮಹಾರಾಜರ ಆಸ್ಥಾನದಿಂದ ಚನ್ನೈ ಪ್ರವಾಸ ಮಾಡುವಾಗ ಈ ಊರಿನಲ್ಲಿ ತಂಗಿದ್ದಳು ಅವಳ ಹೆಸರನ್ನು ಇಡಲಾಗಿದೆ ಅದೇ ನರಸರಾಣಿಪುರ ಮುಂದೆ ನರಸಾಪುರವಾಯಿತು. ಬ್ರಿಟಿಷರು ಮೈಸೂರು ಬೆಂಗಳೂರಿನಿಂದ ಚೆನ್ನೈಗೆ ಹೋಗುವ ದಾರಿಯಾದ ನರಸಾಪುರದಲ್ಲಿ ವಿಶ್ರಮಿಸಿ ಪ್ರಯಾಣಿಸುತ್ತಿದ್ದರು ಇದಕ್ಕೆ ಇಂದಿನ ಮಿಡ್ಲ್ ಸ್ಕೂಲ್ ಕಾಣಬಹುದು ಈ ಊರಿಗೆ 843 ಎಕರೆ ಕೃಷಿ ಪ್ರದೇಶ 1,500 ಎಕರೆ ಅರಣ್ಯ ಪ್ರದೇಶ ಕರ್ನಾಟಕದ ಅತಿ ದೊಡ್ಡ ಕೈಗಾರಿಕಾ ಪ್ರದೇಶಗಳಲ್ಲಿ ಒಂದಾದ ನರಸಾಪುರ ಮೊದಲ ಹಂತದಲ್ಲಿ ಏಳುನೂರು ನಂತರ 75ಎಕರೆ, ಎರಡನೇ ಹಂತದಲ್ಲಿ 1,480ಎಕರೆ, ಮೂರನೇ ಹಂತದಲ್ಲಿ 200ಎಕರೆ ಭೂಮಿಯಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲಾಯಿತು. ಬೆಂಗಳೂರಿಗೆ 50 ಕಿಲೋಮೀಟರ್, ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 50 ಕಿಲೋಮೀಟರ್. ಇದು ಮಾಲೂರು ವೇಮಗಲ್ ಕೈಗಾರಿಕಾ ಪ್ರದೇಶಗಳಿಗೆ ಸಂಪರ್ಕ ಹೊಂದಿದೆ.

ಸುಮಾರು ಏಳು ಸಾವಿರ ಜನಸಂಖ್ಯೆ ಹೊಂದಿದ್ದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಆದಿ ಕರ್ನಾಟಕ ಮಡಿವಾಳರು, ಭಜಂತ್ರಿ, ಕುರುಬರು, ಮುಸ್ಲಿಮರು, ಕುಂಬಾರರು, ಬ್ರಾಹ್ಮಣರು, ಲಿಂಗಾಯಿತರು ವಾಸ ಮಾಡುತ್ತಿದ್ದು, ಕನ್ನಡ, ತೆಲುಗು, ತಮಿಳು ಭಾಷೆಗಳನ್ನು ಮಾತನಾಡುತ್ತಾರೆ. ಇದು ಒಂದು ಸಣ್ಣ ಗ್ರಾಮ ಪಂಚಾಯಿತಿಯಾಗಿದ್ದು, ಇದಕ್ಕೆ ಕುರ್ಕಿ, ಖಾಜಿಕಲ್ಲಹಳ್ಳಿಗೆ ಸೇರಿದ ಹಳ್ಳಿಗಳು ಮಾತ್ರ. ಇಲ್ಲಿ ಧರ್ಮರಾಯಸ್ವಾಮಿ, ದ್ರೌಪದಮ್ಮನ ದೇವಾಲಯ, ಬತ್ತೇಶ್ವರ, ಬೀರೇಶ್ವರ ದೇವರು, ಮಂಟೇಶ್ವರ ಸ್ವಾಮಿ, ಕಾಶಿ ವಿಶ್ವೇಶ್ವರ, ವೀರಭದ್ರ ಸ್ವಾಮಿ, ಓಂ ಶಕ್ತಿ, ಶನೇಶ್ವರ, ಗಂಗಮ್ಮ ಸತ್ಯಂಬಾ, ವೇದಂಬಾ ದೇವಾಲಯಗಳು, ಪುರಾತನ ಬಾಣೇಶ್ವರ ಸ್ವಾಮಿ, ಆಂಜನೇಯ ಸ್ವಾಮಿ, ಲಕ್ಷ್ಮೀನಾರಾಯಣ ಸ್ವಾಮಿ, ಮುತ್ಯಾಲಮ್ಮನ ಗುಡಿಗಳು, ಒಂದು ದರ್ಗಾ, ಒಂದು ಮಸೀದಿ ಇದೆ. ಕೋಲಾರ ಜಿಲ್ಲೆಯಲ್ಲಿ ನರಸಾಪುರ ದ್ರೌಪದಮ್ಮನ ಕರಗ ಜಾತ್ರೆ ಏಳು ದಿನಗಳ ಕಾಲ ಎಲ್ಲಾ ಧರ್ಮದವರು ಒಟ್ಟಿಗೆ ಸೇರಿ ಆಚರಣೆ ಮಾಡುತ್ತಿದ್ದರು. ಹಾಗೆಯೇ ಬತ್ತೇಶ್ವರ, ಬೀರೇಶ್ವರ ಮೂರು ದಿನಗಳ ದ್ಯಾವರುಗಳು ಪೂಜೆ ಜಾತ್ರೆ ಕಂಡುಬರುತ್ತದೆ. ಮುಸಲ್ಮಾನರು ಉರುಸ್ ಆಚರಣೆ ಉಳಿದಂತೆ ಊರ ಜಾತ್ರೆಗಳು ಜರುಗುತ್ತಲೇ ಇರುತ್ತವೆ.

ನರಸಾಪುರದ ಸುತ್ತಮುತ್ತಲಿನ ಗ್ರಾಮಗಳೆಂದರೆ ನಾಗಲಾಪುರ, ಕುರ್ಕಿ, ಖಾಜಿಕಲ್ಲಹಳ್ಳಿ ಬೆಳ್ಳೂರು, ರಾಮಸಂದ್ರ, ಜೋಡಿಕೃಷ್ಣಾಪುರ, ಬೆಳಮಾರನಹಳ್ಳಿ, ಬೆಟ್ಟದಹೊಸಪುರ; ಚುಂಚದೇನಹಳ್ಳಿ ಕೆಂದಟ್ಟಿ, ಗುಡ್ನಾಪುರ, ಲಕ್ಷ್ಮಿಸಾಗರ; ಚೌಡದೇನಹಳ್ಳಿ, ಸೂಲೂರು, ನೂಕಲಾಪುರ, ಗುರುಗಂಜಿಗುರ್ಕಿ ದೊಡ್ಡ ಅಯ್ಯೂರು, ತ್ಯಾವನಹಳ್ಳಿ, ಚಲ್ಲಹಳ್ಳಿ ಪೆಮ್ಮಶೆಟ್ಟಹಳ್ಳಿ, ಅರಭಿ ಕೊತ್ತನೂರು ಮುಂತಾದ ಗ್ರಾಮಗಳನ್ನು ಕಾಣಬಹುದು.

ನರಸಾಪುರದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ 2002ರಲ್ಲಿ ಲಾಲ್ ಭಗವಾನ್‌ದಾಸರು ಎಲ್ ಅಂಡ್ ಎಲ್ ಎಂಬ ಟ್ರಸ್ಟನ್ನು ಪ್ರಾರಂಭಿಸಿ ಇದರ ಮೂಲಕ ವೃದ್ಧರಿಗೆ ಆಶ್ರಯ ನೀಡಿರುವುದಲ್ಲದೆ ಬುದ್ಧಿಮಾಂದ್ಯ ಮಕ್ಕಳ ತರಬೇತಿ ಶಾಲೆಗಳನ್ನು ನಡೆಸುತ್ತಿದ್ದಾರೆ.

ಕೋಲಾರ ಮತ್ತು ನರಸಾಪುರಗಳ ನಡುವೆ ಸುಂದರ ದೇವಾಲಯಗಳು ಅರಭಿ ಕೊತ್ತನೂರು ಪ್ರಮುಖ ಐತಿಹಾಸಿಕ ಸ್ಥಳಗಳಲ್ಲಿ ಒಂದಾಗಿದೆ. ಹೊಯ್ಸಳ, ವಿಜಯನಗರ ಕಾಲದ ಗುಡಿ ಗೋಪುರಗಳು, ಸ್ಮಾರಕಗಳಿಂದ ಕೂಡಿರುವಂಥದ್ದು. ಬೆಟ್ಟ–ಗುಡ್ಡಗಳಿಂದ ಕೂಡಿರುವ ಈ ಪ್ರದೇಶ ಪ್ರಾಕೃತಿಕ ಸೌಂದರ್ಯದ ಜೊತೆಗೆ ಕಾಡುಪ್ರಾಣಿಗಳನ್ನು ಜೀವಂತವಾಗಿ ನೋಡುವಂಥಹ ಸ್ಥಳವಾಗಿದೆ. ಅರಭಿಕೊತ್ತನೂರು ಈ ಹೆಸರಿಗೆ ವಿವಿಧ ಅರ್ಥಗಳನ್ನು ನೀಡಿದ್ದಾರೆ. 'ಅರಭಿ' ಎಂದರೆ 'ವಿಶಾಲ', 'ಕೊತ್ತಾ' ಅಂದರೆ 'ಹೊಸದು' ಎಂಬ ಅರ್ಥವನ್ನು ಕೊಡುವಂತಹ ಸ್ಥಳವಾಗಿದೆ. ಇಲ್ಲಿ ಸಾಕಷ್ಟು ವೀರಗಲ್ಲುಗಳು ಇವೆ. ಸೋಮೇಶ್ವರಸ್ವಾಮಿ, ವೆಂಕಟರಮಣಸ್ವಾಮಿ, ವೀರಭದ್ರಸ್ವಾಮಿ ಬಸವೇಶ್ವರಸ್ವಾಮಿ, ಆಂಜನೇಯಸ್ವಾಮಿ ಹಾಗೂ ಸತ್ಯಮ್ಮ ದೇವತೆಗಳ ದೇವಾಲಯಗಳನ್ನು ಕಾಣಬಹುದು. ಸೋಮೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವಗಳು ವರ್ಷ ಪ್ರತಿ ನಡೆಯುತ್ತಿದೆ.

ನರಸಾಪುರದಿಂದ ಅರ್ಧ ಕಿಲೋಮೀಟರ್ ದೂರದಲ್ಲಿರುವ ಬೆಳ್ಳೂರು ಗ್ರಾಮ. ಇತಿಹಾಸ ಪ್ರಸಿದ್ಧ ಗ್ರಾಮಗಳಲ್ಲೂ ಒಂದಾಗಿದೆ. ಇಲ್ಲಿ ರಾಮಕೃಷ್ಣಮೂರ್ತಿ ವ್ಯಾಖ್ಯಾನಕಾರರು ಹರಿಕಥೆ ಸಂಸ್ಕೃತ ವ್ಯಾಖ್ಯಾನಕಾರರು ಆದ ಇವರಿಗೆ ಅರಿವು ಭಾರತ ಸಂಸ್ಥೆಯ ಕಡೆಯಿಂದ ಗ್ರಾಮರತ್ನ ಪ್ರಶಸ್ತಿಯು ದೂರೆತಿದೆ. ಹಾಗೆಯೇ ಅಂತರಾಷ್ಟ್ರೀಯ ಯೋಗಾಪಟುಗಳು ಕೃಷ್ಣಮಾಚಾರ್ ಶಾಲಾ ಕಾಲೇಜುಗಳು ಪ್ರತಿಷ್ಠಾಪಿತಗೂಂಡಿವೆ.

ಬೆಳ್ಳೂರು ಸ್ಥಳವನ್ನು ವೆಲ್ಲೆಯೂರು ಅಥವಾ ವಿಷ್ಣುವರ್ಧನನ ಚತುರ್ವೇದಮಂಗಳಂ ಇತ್ಯಾದಿ ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಐತಿಹಾಸಿಕವಾಗಿ ಇದು ಕೈವಾರ ನಾಡಿನ ನಿಗರಲಿ ಚೋಳಮಂಡಲದ ಈ ಗ್ರಾಮ ಏಳು ಅಥವಾ ಎಂಟು ನೂರು ವರ್ಷಗಳ ಇತಿಹಾಸವಿರುವ ಹಳೆಯ ಗ್ರಾಮ. ಹೊಯ್ಸಳರ ಶೈಲಿಯಲ್ಲಿರುವ ಕಣ್ಣೇಶ್ವರ ದೇವಾಲಯವನ್ನು ಕ್ರಿ.ಶ.1167ರ ಶಾಸನದಲ್ಲಿ ತಿಳಿಸಿರುವ ಹಾಗೆ ಮಹಾಮಂಡಲೇಶ್ವರ ತ್ರಿಭವನ ಮಲ್ಲನು ತಲ್ಕೈಕಾಡು ಕೊಂಗು ನಂಗಲಿ ಉಚ್ಚಂಗಿ ಬನವಾಸಿ ಪಣಂಗು ಮತ್ತು ಪೆಲ್ಲಾಳುಗಳನ್ನು ಗೆದ್ದು ಸೇನೆಯೊಂದಿಗೆ ಆಕ್ರಮಣ ಮಾಡಿದ ಸಂದರ್ಭದಲ್ಲಿ ವೀರಗಂಗಾ ಪ್ರತಾಪ ನರಸಿಂಹ ಹೊಯ್ಸಳೇಶ್ವರನು ಈ ಪ್ರಾಂತ್ಯವನ್ನು ಆಳ್ವಿಕೆ ಮಾಡಿದನೆಂದು ತಿಳಿದುಬರುತ್ತದೆ. 1288ರ ಶಾಸನದಲ್ಲಿ ಹೊಯ್ಸಳರ ವೀರ ರಾಮನಾಥನ ಆಳ್ವಿಕೆಯಲ್ಲಿ ಗಂಗಾಧರಂ ಎಂಬ ಅಧಿಕಾರಿಯ ಮಗ ಸೋಮದೇವನು ವೀರನಾರಾಯಣ ಎಂಬ ಕೊಯ್ಯಕ್‌ರನಾಡಿಗ ಮಾಂಡಲಿಕನ ಮುಖೇನಾ ವಿಷ್ಣುವರ್ಧನನ

ಚತುರ್ವೇದಿ ಮಂಗಲ ಅಥವಾ ಬೆಳ್ಳೂರು ತಿರುಕಾಂಬೇಶ್ವರ ಶಾಸನದಲ್ಲಿ ಶ್ರೀ ಕೈಲಾಸಂ ದೇವರು ಎಂದು ಕರೆಯಲಾಗಿದೆ ದೇವರಿಗೆ ಮತ್ತು ಮೂಲ ಸ್ಥಾನವಾದ ಎಡೈಯಾರ್ ದೇವರಿಗೆ ಕೈವಾರ ನಾಡಿನಲ್ಲಿದ್ದ ಹಂಬಾಡಕ್ಕೆ ಗ್ರಾಮದಲ್ಲಿದ್ದ ಭೂಮಿಯನ್ನು ದತ್ತಿ ಬಿಟ್ಟಿದ್ದರ ಬಗ್ಗೆ ಮಾಹಿತಿ ಇದೆ.

ಕ್ರಿ.ಶ.1406ರ ಶಾಸನದಲ್ಲಿ ವಿಜಯನಗರ ದೇವರಾಯನ ಆಳ್ವಿಕೆಯಲ್ಲಿ ಬೊಮ್ಮಣ್ಣ ದಂಡನಾಯಕನ ಮಂತ್ರಿಯು ಬೆಳ್ಳೂರಿನ ಸೋಮದೇವರಿಗೆ ಪೂಜೆಯ ಕಾಂಕೈರ್ಯಕ್ಕೆ ಬೈಲನಕುಂಟೆ ಮತ್ತು ತುಜಿಲಹಳ್ಳಿ ದತ್ತಿಬಿಟ್ಟ ವಿಚಾರ ಉಲ್ಲೇಖವಿದೆ. ಕ್ರಿ.ಶ.1286ರ ಶಾಸನದಲ್ಲಿ ಹೊಯ್ಸಳರ ರಾಮದೇವನ 32ರ ವರ್ಷದ ಆಳ್ವಿಕೆಯ ಅವಧಿಯಲ್ಲಿ ಶಾವಶಿವನಾಯನ ಮಗನಾದ ಅಂಕಕಾರ ಗಂಗಾ ಪೆರುಮಾಳ್ ತಟ್ಟರಾದಿತ್ತನು ಹುಲಿಯೂರು ಅಥವಾ ವಿಷ್ಣುವರ್ಧನನ ಚತುರ್ವೇದಿ ಮಂಗಲದ ಶ್ರೀ ಕೈಲಾಸಂ ಒಡಿಯರ್ ಮತ್ತು ಮೂಲಸ್ಥಾನ ಉಡೈಯರ್ ದೇವರುಗಳಿಗೆ ದತ್ತಿಬಿಟ್ಟ ಅಂಶ ಇದೆ. ಕ್ರಿ.ಶ.1153 ಶಾಸನದಲ್ಲಿ ಹೊಯ್ಸಳರ ನರಸಿಂಹನು ವಿಷ್ಣುವರ್ಧನ ಚತುರ್ಭೇದಿ ಮಂಗಳದಲ್ಲಿದ್ದ ರಾಮನಾಥ ದೇವಾಲಯವಿದ್ದು ಗರ್ಭಗೃಹ ಅರ್ಧ ಮಂಟಪ ಮತ್ತು ವಿಶಾಲವಾದ ನವರಂಗಗಳನ್ನು ಕಟ್ಟಿಸಿರುವ ಮಾಹಿತಿ ಇದೆ. ಕ್ರಿ.ಶ.1153ರ ಶಾಸನವು ಮೊದಲನೆಯ ನರಸಿಂಹ ಆಡಳಿತ ಮಾಡುತ್ತಿದ್ದಾಗ ನಿಗರಲಿ ಚೋಳಮಂಡಲದ ವ್ಯಾಪ್ತಿಯಲ್ಲಿದ್ದ ಕೈವಾರನಾಡಿನಲ್ಲಿ ಎಲ್ಲಿಯೂರಿನ ನರಸಿಂಘವಿಣ್ಣಗಾರ ಅಥವಾ ತಿಗೂ ಬೇರಿ ದೇವಾಲಯದ ಪೂಜಾ ಕಾಂಕರ್ಯಕ್ಕೆ ಮಾಧವ ಶೆಟ್ಟಿ ಎಂಬ ಸ್ಥಳೀಯ ಅಧಿಕಾರಿಗೆ ನೀಡಿದ ದಾನ ಶಾಸನ ಇದೆ. ಅದೇ ರೀತಿ ಕ್ರಿ.ಶ.1288ರ ಶಾಸನವು ಗ್ರಾಮದ ಮಂಡಲ ಪುರುಷನ ಕುಮಾರನಾದ ಶಿರಪನ್ನ ಚಾರಿ ನಲ್ಲಪಳ್ಳೀ ಎಂಬ ಶಿಲ್ಪಿಯು ಈ ದೇವಾಲಯದ ಕೆಲಸ ಕಾರ್ಯ ಮಾಡಿದ ಕಾರಣ ಹಲವು ದಾನಗಳನ್ನು ಸ್ವೀಕರಿಸಿದ ಬಗ್ಗೆ ಮಾಹಿತಿ ಇದೆ. ವಿಜಯನಗರ ಬುಕ್ಕಣ್ಣ ಒಡೆಯನ ಮಗ ಕೆಂಪಣ್ಣ ಒಡೆಯನು ಆಳ್ವಿಕೆ ಮಾಡುತ್ತಿದ್ದಾಗ ಆತನ ಅರಮನೆಯ ಪಾರು ಪತ್ತೆದಾರನಾಗಿದ್ದ ದುಗ್ಗಣ್ಣಗರ್ ಬೆಳ್ಳೂರು ಮೌಳವಂಡ ಪೆರುಮಾಳ್ ದೇವರಿಗೆ ದತ್ತಿ ನೀಡಿದ ವಿಷಯವನ್ನು 1363ರ ಶಾಸನದಲ್ಲಿ ಉಲ್ಲೇಖವಿದೆ. ಹೀಗೆ ಹಲವು ಶಾಸನಗಳು ಬೆಳ್ಳೂರಿನಲ್ಲಿ ಐತಿಹಾಸಿಕ ದಾಖಲೆಗಳನ್ನು ಸಾಂಸ್ಕೃತಿಕ ಸೊಬಗನ್ನು ವಿವರಿಸುತ್ತದೆ

ನರಸಾಪುರಕ್ಕೆ ಸುಮಾರು ನಾಲ್ಕು ಕಿಲೋಮೀಟರ್ ದೂರದಲ್ಲಿರುವ ರಾಮಸಂದ್ರದ ಹರಿಕಥೆ ವಿದ್ವಾನ್ ಶ್ರೀ ಎನ್ ಆರ್ ಜ್ಞಾನಮೂರ್ತಿ ಕೀರ್ತನೆಗಳು, ಪುರಾಣಗಳು, ಸಂಗೀತ ಮತ್ತು ಹರಿಕಥೆ ಅಭ್ಯಾಸಗಳ ಪ್ರಭಾವದಿಂದ ಸಾವಿರಾರು ಕೀರ್ತನೆಗಳನ್ನು ಹರಿಕಥೆಗಳನ್ನು ನಡೆಸಿ ಕೊಟ್ಟಿರುತ್ತಾರೆ. ರಾಜ್ಯದ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಮೂಲಕವಾಗಿ ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಕಾರ್ಯಕ್ರಮ ನಡೆಸಿ ಕೊಟ್ಟಿರುತ್ತಾರೆ. 1994ನೇ ಸಾಲಿನ ಪ್ರತಿಷ್ಠಿತ ರಾಜ್ಯ ಪ್ರಶಸ್ತಿ ಕರ್ನಾಟಕ ರಾಜ್ಯ ಅಕಾಡೆಮಿ ನೃತ್ಯ ಸದಸ್ಯನಾಗಿ ರಾಷ್ಟ್ರೀಯ ಸಂಗೀತ ನೃತ್ಯ ಮಹೋತ್ಸವ ಹಂಪಿಯೋತ್ಸವ ಮುಂತಾದ ಕಾರ್ಯಕ್ರಮಗಳನ್ನ ನಡೆಸಿಕೊಟ್ಟಿರುತ್ತಾರೆ. ಇವರಿಗೆ ಕರ್ನಾಟಕ ಕಲಾ ಶ್ರೀ ಪ್ರಶಸ್ತಿ ದೊರೆತಿರುವುದಲ್ಲದೆ ಪ್ರಸ್ತುತ 2023ನೇ ಕೋಲಾರ ತಾಲೂಕಿನ ತಾಲೂಕು ಸಾಹಿತ್ಯ ಪರಿಷತ್ತಿನ ನರಸಾಪುರದಲ್ಲಿ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಕೊಂಡು ಕೀರ್ತಿಗೆ ಪಾತ್ರರಾಗಿದ್ದಾರೆ.

ನರಸಾಪುರ ಗ್ರಾಮ ಕೈಗಾರಿಕಾ ಪ್ರದೇಶಗಳಿಂದ ಕೂಡಿದ್ದು ಬೆಂಗಳೂರಿಗೆ ಕೆಲಸಕ್ಕೆ ಹೋಗಬೇಕಾದ ಜನರನ್ನು ಬೆಂಗಳೂರಿನಿಂದ ಈ ಭಾಗಕ್ಕೆ ಕೆಲಸ ಹುಡುಕಿಕೊಂಡು ಬರುವ ಜನರಿಗೆ ಬದುಕನ್ನು ಕಟ್ಟಿಕೊಳ್ಳಲು

ಅವಕಾಶ ಕಲ್ಪಿಸಿದೆ. ಈ ಭಾಗ ಕೈಗಾರಿಕಾ ಪ್ರದೇಶ ಸ್ಥಾಪಿತವಾದ ಮೇಲೆ ಇಲ್ಲಿ ಹಲವಾರು ಕಂಪನಿಗಳನ್ನ ಸ್ಥಾಪಿಸಿದ್ದು ಅವುಗಳಲ್ಲಿ ಮುಖ್ಯವಾಗಿರುವಂತವು ಕೆ.ಸಿ.ಎಂ.ಅಪ್ಲೈಯನ್ಸ್ ಪ್ರೈವೇಟ್ ಲಿಮಿಟೆಡ್ ಗೃಹಪಯೋಗಿ ಉಪಕರಣಗಳನ್ನು ತಯಾರಿಸುತ್ತದೆ. ಮಹೇಂದ್ರ ಇರೋ ಸ್ಪೇಸ್, ಭಾರತೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಿಗೆ ಎರಡು, ನಾಲ್ಕು ಮತ್ತು ಆರು ಆಸನದ ಕುಟುಂಬ ಮತ್ತು ವಾಣಿಜ್ಯ ವಿಮಾನಗಳನ್ನು ತಯಾರಿಸುತ್ತಿದೆ. ಹೋಂಡಾ ಮೋಟಾರ್ ಸೈಕಲ್ ಮತ್ತು ಸ್ಕೂಟರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಹೋಂಡಾ ಆಕ್ಟಿವ್ ಮತ್ತು ಹೋಂಡಾ ಯುವ ದ್ವಿಚಕ್ರವಾಹನದ ಅತಿ ದೊಡ್ಡ ತಯಾರಿಕೆಯಲ್ಲಿ ಒಂದಾಗಿದೆ. ಟ್ರಯಂ ಕ್ರೂಸ್ ಬೈಕುಗಳ ತಯಾರಿಕೆ, ವೋಲ್ವೋ ಬಸ್ಸುಗಳು ತಯಾರಿಕೆ, ಒಂದು ಇಂಜಿನ್ ಬಿಲ್ಡ್‌ಗಳ ಸ್ಥಾನಿಯ ವೋಲ್ವೋ ಜೊತೆ ಸ್ಪರ್ಧೆಯೊಂದಿಗೆ ವಾಕ್ ವ್ಯಾಗನ್ ಕಂಪನಿಯು ಐಷಾರಾಮಿ ಪ್ರಯಾಣಿಕ ಬಸ್ಸುಗಳನ್ನು, ಎಕ್ಸೀಟ್ ಕ್ಲಚ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕ್ಲಚ್ ಸಿಸ್ಟಮ್ ಗಳನ್ನು ತಯಾರಿಸುತ್ತಿದೆ. ರೋಮ್ಯಾನ್ಸ್ ಆಟೋಮ್ಯಾಟಿಕ್ ಬಿಡಿ ಭಾಗಗಳ ತಯಾರಿಕೆ, ಇಂಡೂ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ತಯಾರಿಕೆ, ಆಸ್ಕ ಆಟೋಮೆಟಿಕ್ ಪ್ರೈವೇಟ್ ಲಿಮಿಟೆಡ್ ದ್ವಿಚಕ್ರವಾಹನಗಳಿಗೆ ಬ್ರೇಕ್ ಬ್ಯಾನರ್‌ಗಳು ಮತ್ತು ಇಂಜಿನ್ ಭಾಗಗಳನ್ನು ತಯಾರಿಸುತ್ತಿದೆ. ವಿಸ್ಟ್ರಾನ್ ಇಂಫೋಕಂ ಭಾರತೀಯ ಮಾರುಕಟ್ಟೆಗೆ ಐಫೋನ್‌ಗಳನ್ನು ತಯಾರಿಸುತ್ತಿದೆ. ಹೀಗೆ ಹಲವು ಕಂಪನಿಗಳು ಈ ಭಾಗಕ್ಕೆ ಪ್ರವೇಶಿಸಿ ದೇಶದ ವಿವಿಧ ಜನರ ಪ್ರವೇಶದಿಂದ ವಿವಿಧ ವೈವಿಧ್ಯಮಯ ಸಂಸ್ಕೃತಿಯೊಂದನ್ನು ಸೃಷ್ಟಿಸುತ್ತಿದೆ.

ಇಡೀ ಜಗತ್ತಿನಲ್ಲಿ ನೀರಿನ ಕೊರತೆಯನ್ನು ಹೇಗೆ ನೀಗಿಸುವುದು ಎಂಬುದಕ್ಕೆ ಮಾದರಿಯಾಗಿ ಕೋಲಾರ ಜಿಲ್ಲೆಗೆ ಮೊಟ್ಟಮೊದಲ ಕೆ.ಸಿ(ಕೋರಮಂಗಲ ಚೆಲ್ಲಘಟ್ಟ) ವ್ಯಾಲಿ ಎಂಬ ಬೆಂಗಳೂರು ನಗರದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೋಲಾರ ಜಿಲ್ಲೆಯ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ 126 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆ ಬಹಳ ಯಶಸ್ವಿಯಾಗಿದೆ. ಈ ಯೋಜನೆ 30.11.2013ರಲ್ಲಿ ಪ್ರಸ್ತಾಪಿತಗೊಂಡು ಸಣ್ಣ ನೀರಾವರಿಗೆ ಸೂಚನೆ ದೊರೆತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಯಿತು.

ನಂತರ ಸರಕಾರದ ಆಡಳಿತದ ಅನುಮೋದನೆ ಪಡೆದು 2018ರಲ್ಲಿ ಟೆಂಡರ್ ಪ್ರಕಟಣೆಗೊಂಡು ಆರಂಭದಲ್ಲಿ 1580 ಕೋಟಿಗಳು ಮೆಗಾ ಇಂಜಿನಿಯರಿಂಗ್ ಲಿಮಿಟೆಡ್ ಹೈದರಾಬಾದ್ ಇವರಿಗೆ ವಹಿಸಲಾಯಿತು. ಈ ಕಾಮಗಾರಿ ಬಿಬಿಎಂಪಿ ಕೆರೆ ಸಂರಕ್ಷಣಾ ಪ್ರಾಧಿಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಎಚ್.ಎ.ಎಲ್, ಎ,ಎಲ್.ಡಿ.ಓ, ರೈಲ್ವೆ ಇಲಾಖೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ರಾಷ್ಟ್ರೀಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪಂಚಾಯತ್ ರಾಜ್, ಕೆ.ಪಿ.ಟಿ.ಸಿ.ಎಲ್, ಬೆಸ್ಕಾಂ, ಟ್ರಾಫಿಕ್, ಪೊಲೀಸ್, ಅರಣ್ಯ ಇಲಾಖೆಯ ಅನುಮತಿಯ ಮೇರೆಗೆ ಯೋಜನೆ ಕಾರ್ಯಕ್ರಮ ಆರಂಭಗೊಂಡಿತು. (ಕೆ.ಸಿ) ಕೋರಮಂಗಲ ಮತ್ತು ಚಲ್ಲಘಟ್ಟ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ಬೆಳ್ಳಂದೂರು, ನರಸಾಪುರ ಕೆರೆಗೆ ನೀರು ಹರಿವಿಕೆ ಅಲ್ಲಿಂದ ಒಂದು ಪಾಯಿಂಟ್ ಮುಖಾಂತರ ಶಿವಾರಪಟ್ಟಣ ಕೆರೆಯಿಂದ ಚಿನ್ನಾಪುರ ಕೆರೆಗೆ, ಬಾವನಹಳ್ಳಿ ಕೆರೆಗೆ, ಮತ್ತೊಂದು ಪಾಯಿಂಟ್‌ನಿಂದ ನರಸಾಪುರದಿಂದ ಹೊಳಲಿಕೆರೆಗೆ, ಜನ್ನಘಟ್ಟ ಕೆರೆಯಿಂದ ದಂಡುಪಾಳ್ಯ ಕೆರೆಗಳಿಗೆ, ಮತ್ತೊಂದು ಪಾಯಿಂಟ್‌ನಿಂದ ನರಸಾಪುರದಿಂದ ಅಮ್ಮೇರಹಳ್ಳಿ ಕೆರೆ, ಕೋಲಾರ ಕೆರೆಗೆ ಹರಿಯುತ್ತಿದೆ. ಒಟ್ಟು 120.887ಕಿಲೋ ಮೀಟರ್ ನೀರು ಹರಿಯುತ್ತಿದೆ.

ಮೊದಲ ಹಂತದಲ್ಲಿ 126 ಕೆರೆಗಳಿಗೆ, ನಂತರದ ಕೋಲಾರ ಜಿಲ್ಲೆಯ 14 ಕೆರೆಗಳು, ಇದರೊಂದಿಗೆ ಹೊಸಕೋಟೆ ತಾಲೂಕಿನ 5 ಕೆರೆಗಳು ಒಟ್ಟು 145 ಕೆರೆಗಳಿಗೆ 8. 04 ಟಿ.ಎಂ.ಸಿ ಮತ್ತು 133 ಚೆಕ್ ಡ್ಯಾಂ 1.20 ಟಿ.ಎಂ.ಸಿ ಒಟ್ಟು 9.24 ಟಿ.ಎಂ.ಸಿ ನೀರನ್ನು ಏತ ನೀರಾವರಿ ಮೂಲಕ ಪಂಪ್ ಮಾಡಿ ಪೂರ್ಣ ಪ್ರಮಾಣದಲ್ಲಿ ತುಂಬಿಸಲಾಗಿರುತ್ತದೆ. ಇದರಿಂದ ನೀರಿನಿಂದ ಬಳಲುತ್ತಿದ್ದ ಈ ಭಾಗ ಯಥೇಚ್ಛ ಜೌಗುನೀರಿನ ಅಂತರ್ಜಲ ಹೆಚ್ಚಳಗೊಂಡು ಬಾವಿ, ಕೊಳವೆ ಭಾವಿಗಳಲ್ಲಿ ನೀರಿನ ಪ್ರಮಾಣ ಹೆಚ್ಚಳಗೊಂಡಿದೆ ಇದರಿಂದ ಕೃಷಿ ಜನರಿಗೆ ಖುಷಿಯನ್ನು ತಂದಿದೆ.

**ಉಪಸಂಹಾರ**

ಕೋಲಾರ ಜಿಲ್ಲೆ ಹತ್ತು ಹಲವು ಸಾಂಸ್ಕೃತಿಕ ಮಹತ್ವಗಳನ್ನು ಪಡೆದುಕೊಂಡಿದ್ದು ಹಲವು ಪೌರಾಣಿಕ ಕಥೆಗಳಿಂದ ರಾಜ ಮಹಾರಾಜರು ಆಳ್ವಿಕೆಯನ್ನು ನಡೆಸಿದ್ದು ಭೌಗೋಳಿಕವಾಗಿ ತಮ್ಮದೇ ಆದ ಸುಂದರ ಪರಿಸರವನ್ನು ಬೆಟ್ಟಗುಡ್ಡಗಳನ್ನು ಪಡೆದಿದ್ದು ಜನರು ತಮ್ಮ ಜೀವನಗಳನ್ನು ಕೃಷಿಯಿಂದ, ಹಾಲಿನಿಂದ, ವಿವಿಧ ಕೈಗಾರಿಕಾ ಪ್ರದೇಶಗಳಿಂದ, ಕಲೆ–ವಾಸ್ತುಶಿಲ್ಪ ಮತ್ತು ವಿವಿಧ ಆಚಾರ–ವಿಚಾರಗಳು, ಆಚರಣೆಗಳು–ಸಂಪ್ರದಾಯಗಳು ಇತರ ಜಿಲ್ಲೆಗಳಿಗೆ ಮಾದರಿಯಾಗಿ ಕಂಡು ಬಂದಿದೆ. ವಿಶೇಷವಾಗಿ ಕೋಲಾರ ಜಿಲ್ಲೆಯ ನರಸಾಪುರ ಭಾಗದಲ್ಲಿ ಸಾಂಸ್ಕೃತಿಕ ಮಹತ್ವ ಪಡೆದಿರುವುದು ಇಂದಿಗೂ ಕಾಣಬಹುದು.

**ಪರಾಮರ್ಶನ ಗ್ರಂಥಗಳು**


- ರೈಸ್. ಬಿ.ಎಲ್. (1897). ಮೈಸೂರ್ ಗೆಜೆಟಿಯರ್, ಮೈಸೂರು.
- ಚಿತ್ರಂಜನ್(ಸಂ). (2005). ಕನ್ನಡ–ಕೋಲಾರ ಜಿಲ್ಲಾ ಗ್ಯಾಜೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕೋಲಾರ.
- ಗೋವಿಂದ ರೆಡ್ಡಿ. ಸಿ. ಎಮ್. (2013). ಊರು ತೇರು ಕೋಲಾರ ಜಿಲ್ಲಾ ಜಾತ್ರೆಗಳ ಅಧ್ಯಯನ, ಶಕ್ತಿ ಪ್ರಕಾಶನ, ಕೋಲಾರ.
- ಸುಂದರರಾವ್. ಬ.ನ. (2008). ಕೋಲಾರ ಜಿಲ್ಲಾ ದರ್ಶನ, ಕೋಲಾರ.
- ಸಿರಿನಂದಿ. (1999). ಕೋಲಾರ ಜಿಲ್ಲಾ ನಂದಿ ಉತ್ಸವ ಸ್ಮರಣ ಸಂಚಿಕೆ, ಕೋಲಾರ.
- ಕೋಲಾರ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ಮಾಹಿತಿ ಸಂಗ್ರಹಣೆ, ಕೋಲಾರ.
- ಕೋಲಾರ ಜಿಲ್ಲಾ ಸಣ್ಣ ನೀರಾವರಿ ಕಛೇರಿಯಿಂದ ಮಾಹಿತಿ ಸಂಗ್ರಹಣೆ, ಕೋಲಾರ.
- ಅಭಿಶಂಕರ್. ಕೆ.(ಸಂ). (1968). ಕೋಲಾರ ಜಿಲ್ಲಾ ಗೆಜೆಟಿಯರ್ (ಇಂಗ್ಲೀಷ್), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕೋಲಾರ.